ಆಲೋಚನೆ ಮಾಡಲ್ವ?’ ಅನ್ನುತ್ತಾ ಎದೆ ತಟ್ಟಿಕೊಂಡು ಹೇಳಿದಾಗ ಶಾರದಮ್ಮ ನಕ್ಕರು. ‘ತೀರಾ ಹಚ್ಕೊಂಡೀರಿ, ಅವಳಿಗೂ ಮದುವೆ ಆಯ್ತು. ಸಂಸಾರ ಬೆಳೀಲಿ, ನಮ್ಮ ಕಡೆ ನೋಡದೇ ಬಳ್ಳಿ ಒಳಗಿನ ಹೂನಂಗ್ ಬಾಳ್ತಾಳೆ. ಆದರೂ ನೀವು ತಂದೆ ಮಗಳು ಮೋಹನಮೂರ್ತಿ ಫ್ಯಾನ್ಸಿ ಅಂಗಡಿಗೆ ಬಳೆ ತರಲು ಹೋಗಿದ್ದಾಗ ಹಂಗೇ ಅಳಿಯಂದ್ರನ್ನ ಕೇಳಿದೆ; ಏನಪ್ಪ ಮಗಳು ನಿಮ್ ಹತ್ರ ಚೆಂದಾಕಿದ್ದಾಳಾ, ಹೊಂದಿಕೆ ಆಗಿದ್ದಾಳಾ, ಅವಳು ಬಲು ನಾಜೂಕು, ನಾಚಿಕೆ ಜಾಸ್ತಿ...’ ಅಂತ.

‘ಏನಂದ್ರು ಅಳಿಯಂದ್ರು?’

ದೊಡ್ಡ ನಿಟ್ಟುಸಿರು ಬಿಟ್ಟು... ‘ಓ ಬಹಳ ಚೆನ್ನಾಗಿದ್ದೀವಿ, ಹೊಂದಿಕೆ ಆಗ್ತಾಳೆ... ಬಿಡಿ ಅಂದ್ರು. ಆದರೆ ಅವರ ದನೀಲಿ ಎಂತದೋ ನಿರಾಸೆಯಿತ್ತು. ಮತ್ತೆ ಮಾತು ಬೆಳೆಸದೇ ಸುಮ್ಮನಾದೆ’.

‘ಹೌದಾ... ಹೊಸತಲ್ವಾ... ಪರಿಮಳ ಯಾರ್ ಜೊತೆ ಬೇಗ ಹೊಂದ್ಕೊತಾಳೆ? ಇಲ್ಲಿದ್ದಾಗ ಕೇರಿಯವರನ್ನ, ಸಂಬಂಧಿಕರನ್ನ ಯಾರನ್ನೇ ಆಗಲಿ ಮನೆಗೆ ಬಂದವರನ್ನ ತಿರುಗಿಯೂ ನೋಡದೇ ರೂಮು ಸೇರ್ಕೋತಿದ್ಲು. ಅತಿ ನಾಚಿಕೆ ಅವಳಿಗೆ. ಮುಂದೆ ಸರಿ ಹೋಗುತ್ತೆ ಬಿಡು’ ಅಂತ ಮಾತಾಡಿಕೊಂಡಿದ್ದರು.

‘ಅಪ್ಪಾ ತೆಗದು ಬಿಡ್ಲಾ?’ ಸಿದ್ರಾಮ ಕಿರುಚಿದಂತೆ ಕೇಳಿದ.

ಕರಿಸಿದ್ದ ಗಾಬರಿಗೆ ಬಿದ್ದ, ಆ ದನಿಗೆ.

‘ಇರಪ್ಪಾ, ವ್ಯವಾರನೇ ಬಗೆ ಹರಿದಿಲ್ಲ. ಕೊಡದ್ ಕೊಟ್ಟು...’ ಅಂತಾ ರಾಗ ತೆಗೆದ ಹಾಲೇಶಪ್ಪನ ಮಾತಿಗೆ ಕರಿಸಿದ್ದ ಏನೆಂಬಂತೆ ಮಕ ಮಕ ನೋಡಿದ.

‘ಏ, ಇವರವ್ವ ಸ್ಟೌ ಮೇಲೆ ಟೀಗಿಟ್ಟಿದ್ದಾಳಲ್ಲ... ಅದನ್ನ ತಗೀಲಾ ಅಂತಿದ್ದಾನೆ’ ಅಂದ ಹಾಲೇಶಪ್ಪನ ಮಾತಿಗೆ ಮಗ ಮತ್ತೆ ಕುದ್ದು ಹೋದ.

ಉಪ್ಪಿಟ್ಟು ಖಾಲಿ ಮಾಡಿ ಪ್ಲೇಟು ಕೆಳಗಿಟ್ಟು ಕೈ ತೊಳೆದ ಕರಿಸಿದ್ದ. ಮಕ ಹುಳ್ಳಗ್ ಮಾಡ್ಕಂಡಿದ್ದ. ಮನೇಲಿ ಏನೋ ಸರಿ ಇಲ್ಲ ಅನ್ನೋ ಸಣ್ಣ ಗುಮಾನಿ ಇವನಿಗೆ!

ಹೊರಗಿನ ಕಟ್ಟೆ ಮೇಲೆ ಹಳೆಯ ಹಾಡುಗಳು ಜೋರಾಗಿಯೇ ಇದ್ವು. ರೇವಣೆಯ ಹಳೆಯ ಹಾಡು ಕೇಳುತ್ತಲೇ ಸಿದ್ರಾಮ ಅಕ್ಕನ ನೆನೆದು ಸ್ಟೌ ಎದುರು ಕಣ್ಣೀರಿಟ್ಟ.

ಇಡೀ ಆ ಹಳ್ಳಿಗೆ ಟೀವಿ ಅಂತ ಬಂದಿದ್ದು ಹಾಲೇಶಪ್ಪನ ಮನೆಗೆ; ಅದೂ ಬ್ಲಾಕ್ ಅಂಡ್ ವೈಟು. ಕೇರಿ ಮಂದಿಯೆಲ್ಲಾ ಮನೆಯೊಳಗಡೆ ಜಾತ್ರೆ ಇದ್ದುದರಲ್ಲೂ ಭಾನುವಾರದ ಸಿನಿಮಾಕ್ಕೆ ಹೌಸ್‌ಫುಲ್. ಅಡಿಗೆಮನೆಯ ಮೂಲೆಗೆ ಒಂದು ಕುರ್ಚಿಮೇಲೆ ಕೂತರೆ ಟೀವಿ ಪೂರಾ ಕಾಣೋದು ಪರಿಮಳಗೆ. ನೂರಾರು ಚಾನಲ್ಗಳು ಇಲ್ಲದ ಕಾಲ ಅದು. ಭಾನುವಾರದ ಸಿನಿಮಾ, ಬುಧವಾರ, ಶುಕ್ರವಾರದ ಚಿತ್ರಮಂಜರಿಯ ಹಾಡುಗಳು ಜೊತೆಗೆ ತಿಂಗಳಿಗೊಂದು ರಾಷ್ಟ್ರೀಯ ಚಾನಲ್‌ನಲ್ಲಿ ಮಧ್ಯಾಹ್ನ ಬರೋ ಕನ್ನಡ ಸಿನಿಮಾ... ಇಷ್ಟು ಅಕ್ಕ ತಮ್ಮ ತಪ್ಪದೇ ನೋಡುತ್ತಿದ್ದದ್ದು ಎಲ್ಲರಿಗೂ ಗೊತ್ತಿರೋ ಸುದ್ದಿ. ಆದರೆ ಅದರಲ್ಲಿನ ಹಾಡುಗಳನ್ನ ಕಲಿತು ಹಾಡುತ್ತಾ ತಮ್ಮಂದಿರಿಗೆ ಕಲಿಸುತ್ತಿದ್ದದ್ದು ಯಾರಿಗೂ ಗೊತ್ತಿರಲಿಲ್ಲ. ಪರಿಮಳ ಕಂಠ ಬಹಳ ಮಧುರ. ಸಿದ್ರಾಮನಿಗೆ ಅಕ್ಕನ ಕಂಠದಿ ಕನ್ನಡ ಹಾಡುಗಳೆಂದರೆ ಇಚ್ಕವರೆಕಾಳ್ ಸಾರು ರಾಗಿ ಮುದ್ದೆ ಉಂಡಷ್ಟೇ ಖುಷಿ. ಅವನು ಪಿಯೂಸಿ ಮುಗಿಸಿದಾಗ ಮುಂದೆ ಏನು ಮಾಡಬೇಕೆಂದು ಚಿಂತಿಸುವಾಗ ಈ ಲ್ಯಾಬ್ ಟೆಕ್ನಿಷಿಯನ್ ಕೋರ್ಸ್ಗೆ ಹೇಳಿದ್ದೇ ಪರಿಮಳ! ಅವಳು ಹಾಡುವಾಗ ಅವಳು ಕಣ್ಮುಚ್ಚಿ ಕೊರಳೆತ್ತಿ ಆಲಾಪಗೈವ ಭಿನ್ನ ಭಂಗಿ ಇವನಿಗೆ ದೇವತೆಯೇ ಹಾಡಿದಷ್ಟು ಸಂತೋಷ.

ಅಪ್ಪ ಅಮ್ಮ ದಾವಣಗೆರೆಗೋ ನೆಂಟರ ಮದುವೆಗಳಿಗೋ ಹೋದರೆ ಈ ಮೂವರ ಸಂಗೀತ ಕಛೇರಿಗೆ ಕಳೆಯೋ ಕಳೆ. ಚಿಕ್ಕ ತಮ್ಮನಿಗೆ ಪರಿಮಳ ಸಣ್ ಸಣ್ಣ ಹಾಡುಗಳನ್ನು ಕಲಿಸಿ ಖುಷಿಪಡಿಸುತ್ತಿದ್ದದ್ದು, ಮೊನ್ನೆ ಮೊನ್ನೆ ಅವರ ಭಾವ ಬಂದಾಗ ಹಳೆಯ ಹಾಡೊಂದನ್ನು ಹೇಳಿ ತಾನೂ ಅತ್ತು ಮನೆಮಂದಿನೆಲ್ಲಾ ಅಳಿಸಿದ್ದ.

ಕೊರೊನಾದಿಂದ ಪರಿಮಳ ಸತ್ತಳೆಂದು ಕೆಲವರು ಮಾತಾಡಿದರೂ ಅದಕ್ಕಿದ್ದ ಕಾರಣವೇ ಬೇರಿತ್ತು!

‘ಏನು ಕರಿಸಿದ್ದ, ನಮ್ಮ ಪರಿಮಳ ನಿಂಗೆ ಹೆಂಗ್ ನೆನಪಾಗ್ತಳೆ?’ – ಹಾಲೇಶಪ್ಪನವರೀಗ ದನಿ ಎತ್ತರಿಸಿದರು.

‘ಏನ್ ಮಾವ, ಮನೆ ಮಗಳು ನಮ್ ಪರಿಮಳ ನಿಮಗೆಂಗೋ ಹಂಗೇ ನಂಗೂ ಅಲ್ವಾ?’

‘ನಿಂಗೆ ಹೆಂಗೆ ಅಂತಿರೋದು ಅಪ್ಪಾ...’ ಸಿದ್ರಾಮ ಕೂಗಿದ.

‘ಹೆಂಗೆ ಅಂದ್ರೆ ಒಳ್ಳೆ ಮಗಳು, ಅಕ್ಕನ ಮಗಳು ನಂಗೂ ಒಂತರಾ...’ ಎಂದು ರಾಗ ಎಳಿತಿದ್ದಂತೇ ಶಾರದಮ್ಮ, ‘ಮಗಳಾ ಅಥವಾ ಮಗ್ಗುಲಿಗೆ ಮಲಗೋ ಹೆಣ್ಣಾ...’ ಎನ್ನುತ್ತಾ ಅವಳ ಕಣ್ಣ ನೀರು ನೆಲ ಮುಟ್ಟಿದವು.

ಕರಿಸಿದ್ದ ನಿಜಕ್ಕೂ ಈಗ ಕೋಟೆಯ ನಡುವೆ ಸಿಕ್ಕಿಕೊಂಡ ಒಂಟಿಸೈನಿಕ ನಾನು ಅಂದುಕೊಂಡ. ‘ಏ ಏನಕ್ಕ ಬೆಳೆದ ಮಕ್ಕಳೆದುರಿಗೆ... ಎಂಥಾ ಮಾತಾಡ್ತಿ ತಗಿಯಕ್ಕ... ನೀ ನಮ್ಮ ಖಾಸಾ ಚಿಕ್ಕಪ್ಪನ ಮಗಳು ನಂಗೆ ಅಕ್ಕ ತಾನೇ? ನಿನ್ ಮಗಳು?’

‘ಅದೇ ಯಾವ ದೃಷ್ಟಿಯಿಂದ ನೋಡಿದ್ದೆ...’ ಹಾಲೇಶಪ್ಪ ಗುಡುಗಿದರು.

ಹೊರಗೆ ರೇವಣೆಯ ಬಾಯಿಂದ, ‘ಒಲವಿನ ಪೂಜೆಗೆ ಒಲವೇ ಮಂದಾರ ಒಲವೇ...’ ಹಾಡು ಕೊಳಲ ಸ್ವರದಂತೆ ಕೇಳುತ್ತಿತ್ತು.

‘ಅದೇನ್ ಹೇಳಬೇಕೋ ನೇರ ಹೇಳಿ ಮಾವ... ಯಾಕೋ ಇದು ವಿಚಿತ್ರ ಅನ್ನಿಸ್ತಿದೆ’ ಅಂದ ಕರಿಸಿದ್ದ ಮಕ ಸಿಂಡರಿಸಿಕೊಂಡು.

ಶಾರದಮ್ಮ ಸೆರಗಿಂದ ಬಾಯಿ ಮುಚ್ಚಿಕೊಂಡೇ ‘ಅಯ್ಯೋ... ಮನೆ ದೀಪದಂಗಿದ್ದ ಮಗಳು ಹೋದಳು. ಆದರೆ ಅವಳು ಉಳಿಸಿಹೋದ ಗಾಯ ಅವಳಿಂದ ಅಲ್ಲ, ಅವಳಿಗೆ ನೀ ಮಾಡಿದ ಗಾಯ ನಮಗೀಗ ಕೀವಾಗಿ ಕಾಡ್ತಿದೆ. ಅವಳ ಸಾವಿಗಿಂತ ನೀ ಮಾಡಿದ ದ್ರೋಹ? ಛೆ...’ ಅಂತ ಉಮ್ಮಳಿಸಿಬಿಟ್ಟರು.

ಕರಿಸಿದ್ದ ಬೆವರಲಾರಂಭಿಸಿದ.

‘‘ಕಳೆದ ತಿಂಗಳು ಅವಳ ಪೂಜೆ ಇತ್ತು. ಎಲ್ಲಾ ಮುಗಿದು ಬಂದವರೆಲ್ಲಾ ಹೋದಮೇಲೆ ರಾತ್ರಿ ಊಟಕ್ ನಾವ್ ನಾವೇ ಕೂತಾಗ ಅಳಿಯಂದ್ರು ಎಲೆ ಮುಂದೆ ಕೂತು ಇನ್ನಿಲ್ಲದಂತೆ ಅತ್ತು ಬಿಟ್ಟರು. ಚಿಕ್ಕ ಮಗ ರೇವಣಿನ ದನ ಕರ ನೋಡ್ಕಳ್ಳಿ ಅಂತ ಊರಿಗ್ ಕಳಿಸಿಯಾಗಿತ್ತು. ನಾನು, ಶಾರದ ಮತ್ತು ಸಿದ್ರಾಮ ಅಷ್ಟೆ ಇದ್ದದ್ದು. ಹೆಂಡತಿ ನೆನಪಾಗಿ ಅಳ್ತಿದ್ದಾರೆ ಅಂತ ನಾವೂ ಅತ್ವಿ. ಸಿದ್ರಾಮ ಎದ್ದು ಹೋಗಿ ಮಾವನ ಹೆಗಲಿಗೆ ಕೈ ಹಾಕಿ ಸಮಾಧಾನ ಮಾಡಿದರೂ ಅಳು ನಿಲ್ಲಿಸದ ಅಳಿಯಂದ್ರು ದುಃಖಿಸುತ್ತಲೇ ಹೇಳಿದ ಒಂದು ವಿಷಯ ನಮಗಿನ್ನೂ ಜೀರ್ಣಿಸಿಕೊಳ್ಳಲಾಗಿಲ್ಲ. ಕೊರೊನಕ್ಕಿಂತ ಭಯಂಕರದ ಸುದ್ದಿ ಅದು...

ಅಳಿಯಂದ್ರು ಹೇಳುತ್ತಾ ಹೋದರು...

‘ಪರಿಮಳ ಮೊದಲಿಂದಲೂ ನಿಮಗೆ ಗೊತ್ತಿರುವಂತೆ ಮುಜುಗರದ ಸ್ವಭಾವ. ಮದುವೆ ಆದ ಒಂದು ವರ್ಷದ ತನಕ ನನ್ನ ಬಳಿಯೇ ಸರಿಯಾಗಿ ಹೊಂದಾಣಿಕೆ ಆಗಿರಲಿಲ್ಲ. ಎಲ್ಲದಕ್ಕೂ ದೂರ ದೂರ. ನಂಗೂ ಕೊನೆ ಕೊನೆಗೆ ಜಿಗುಪ್ಸೆ ಬಂದಂತಾಗಿ ಎಲ್ಲಾ ನಿಮ್ಮ ಬಳಿ ಹೇಳುವ ಮನಸಾಗಿ ಬಹಳ ಸಾರಿ ಬಂದೆ. ನಿಮ್ಮ ಸಂಸಾರದಲ್ಲಿ ಖುಷಿಯಿಂದ ನೀವು ಇರುವಾಗ ನಮ್ಮ ನೋವು ಹೇಳೋದು ಬೇಡ ಅಂತ ಸುಮ್ಮನಾಗ್ತಿದ್ದೆ. ನಾನೇ ಅವಳ ಸಹವಾಸಕ್ಕೆ ಹೋಗದೇ, ಮಾತೂ ಕೂಡಾ ಆಡಿಸದೇ ಇರ್ತಿದ್ದೆ. ಆದರೆ ಅವಳು ಕ್ರಮೇಣ ಸರಿಹೋದಳು. ಒಂದು ಬಾರಿ ಇಡೀ ರಾತ್ರಿ ಅತ್ತಳು. ನಾ ಯಾಕೆ, ಏನಾಯ್ತು ಅಂದರೂ ಅಳು ನಿಲ್ಲಲಿಲ್ಲ. ಎಷ್ಟೋ ಹೊತ್ತಿನ ನಂತರ ದುಃಖಿಸುತ್ತಲೇ ಹೇಳಿದಳು.

ಸರಿರಾತ್ರಿ ದಾಟಿತ್ತು.

ನಾನು ಸರಿಯಿಲ್ಲ, ನಂಗೆ ಗಂಡಸರು ಬೇಡ. ನಮ್ಮ ಕುಟುಂಬ ದೇವರ ಮನೆಯಂತೆ ಇತ್ತು. ಅಪ್ಪ ಅಂದ್ರೆ ನಂಗೆ ಈಗಲೂ ದೇವರೇ! ಎಸ್.ಎಸ್.ಎಲ್.ಸಿ. ಓದೋ ಕೊನೆಯ ದಿನಗಳಲ್ಲಿ ನಮ್ಮ ತೋಟದ ಪೂಜೆಗೆ ಎಲ್ಲರೂ ಹೋಗಿದ್ರು. ಮಧ್ಯಾಹ್ನ ನೀನೂ ಬಾ ಅಂತ ಹೇಳಿದ್ರು. ಹೋಳಿಗೆ, ಸೀಕರಣೆ ಚಿತ್ರಾನ್ನ, ಹಪ್ಪಳ ಸಂಡಿಗೆ ಮಜ್ಜಿಗೆ ಎಲ್ಲ ಅಮ್ಮನ ಜೊತೆ ಸೇರಿ ರೆಡಿ ಮಾಡಿದವಳು ನಾನು. ಕ್ಲಾಸ್ ಟೀಚರ್‌ನ ಕೇಳಿಕೊಂಡು ಹೊರಟಾಗ ದಾರಿ ದೂರ ಇತ್ತು. ನಡೆದು ಹೊರಟಿದ್ದೆ ಹಿಂದಿನಿಂದ ಸೈಕಲ್ ಬೆಲ್ ಸದ್ದು ತಿರುಗಿ ನೋಡಿದರೆ ಕರಿಸಿದ್ದ ಮಾವ! ಎಲ್ಲಿಗವ್ವ ಅಂದ ಮಾವನಿಗೆ ವಿಷಯ ತಿಳಿಸಿದೆ; ಅಯ್ಯೋ ನಾನೂ ಅತ್ಲಾಗೆ ಹೋಗ್ತೀನಂತ ಸೈಕಲ್ ಹತ್ತಿಸಿ ಹೊಂಟ. ತೋಟ ಯಾವಾಗ ಸಿಗುತ್ತೋ ಅನ್ನಿಸ್ತಿತ್ತು... ಅದರಲ್ಲಿ ಕೂತು. ದಾರಿ ತುಸು ವಕ್ರ ಇತ್ತು. ತೆಂಗಿನ ತೋಪು ದಾಟಿ ಹೋಗಬೇಕಿತ್ತು... ಮಾವನ ಮನಸಲ್ಲಿ ಏನಿತ್ತೋ ಒಂದು ತೋಟದ ಬದುವಿಗೇ ನನ್ನ ಕೆಡವಿಬಿಟ್ಟ. ಸೈಕಲ್ ಬ್ಯಾಲೆನ್ಸ್ ತಪ್ಪಿತೇನೋ ಅಂದುಕೊಂಡೆ, ನನ್ನ ಜೀವನದ ಬ್ಯಾಲೆನ್ಸೇ ತಪ್ಪಿಸಿಬಿಟ್ಟಿದ್ದ. ಅಲ್ಲಿ ಆ ಕಾಡಲ್ಲಿ ಹಪ್ಪಳದಂತೆ ನನ್ನ ನುರಿದುಬಿಟ್ಟ, ಮುರಿದುಬಿಟ್ಟ. ಹದಿನೈದರ ಹುಲ್ಲೆ ಮೇಲೆ ಮೂವತ್ತರ ಹುಲಿ ಬಿದ್ದಿತ್ತು! ಮನೆ ಮಂದಿಗಂತೂ ಏನೂ ಗೊತ್ತಾಗದ ಹಾಗೆ ನಟಿಸಿ ತೋಟದಲ್ಲಿಯೂ ಉಂಡುಹೋದ!